# ಬ್ಯಾಂಕ್ ಪರೀಕ್ಷೆಗೆ ಕನ್ನಡದ ಪಠ್ಯ

**ಯುಟ್ಯೂಬ್ ನೋಡಿಯೇ ಬ್ಯಾಂಕಿಂಗ್ ಪರೀಕ್ಷೆಗೆ ತಯಾರಿ ನಡೆಸುವ ಕಾರ್ಯಕ್ರಮ ರೂಪಿಸಿದ್ದಾರೆ ಪ್ರವೀಣ. ಬ್ಯಾಂಕ್ ಉದ್ಯೋಗ ಬಿಟ್ಟು, ಪೂರ್ಣಾವಧಿ ತರಬೇತುದಾರರಾಗಿರುವ ಅವರೊಂದಿಗೆ 'ಸುಧಾ'ದ ಕಿರು ಸಂದರ್ಶನ.**

■ ರಾಘವೇಂದ್ರ ಕೆ.



ಪ್ರವೀಣ

◆ **ಯುಟ್ಯೂಬ್ ಪಾಠದ ಆಲೋಚನೆ ಬಂದಿದ್ದು ಹೇಗೆ?**

ನಾನು ಬ್ಯಾಂಕ್‌ನಲ್ಲಿ ಉದ್ಯೋಗದಲ್ಲಿದ್ದಾಗ ಸರ್ಕಾರದ ಪ್ರಾಯೋಜಕತ್ವದಲ್ಲಿ ಉಚಿತ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಪಾಠ ಮಾಡುವ ಅವಕಾಶ ಸಿಕ್ಕಿತು. ಆಗ ಬೋಧನೆಯನ್ನೇ ವೃತ್ತಿ ಮಾಡಿಕೊಳ್ಳುವ ಕನಸು ಕಂಡೆ. ಈ ಬಗ್ಗೆ ಗೆಳೆಯರ ಜೊತೆ ಚರ್ಚಿಸಿದೆ. ಬ್ಯಾಂಕಿಂಗ್ ಪರೀಕ್ಷಾ ತರಬೇತಿಯನ್ನು ಕನ್ನಡದಲ್ಲಿ ನೀಡಬೇಕು ಎನ್ನುವ ದೃಷ್ಟಿಯಿಂದ ಒಂದು ಸಂಸ್ಥೆಯನ್ನು ಹುಟ್ಟುಹಾಕಿದೆವು. ಅದರ ಮಿತಿಯನ್ನು ಅರಿತು ಅಂತರ್ಜಾಲದ ಮೂಲಕ ಏಕಕಾಲದಲ್ಲಿ ಸಾಕಷ್ಟು ಜನರನ್ನು ತಲುಪಬಹುದು ಎಂದು ಯುಟ್ಯೂಬ್ ವಿಡಿಯೊ ಅಪ್‌ಲೋಡ್ ಮಾಡುತ್ತಿದ್ದೇವೆ. ಇಂಗ್ಲಿಷ್–ಹಿಂದಿಯಲ್ಲಿ ಇಂತಹ ಹಲವಾರು ವಿಡಿಯೊ ಪರೀಕ್ಷಾ ಸವಲತ್ತುಗಳಿವೆ. ಕನ್ನಡದಲ್ಲಿ ಇಲ್ಲ ಎನ್ನುವ ದೃಷ್ಟಿಯಿಂದಲೇ ಇದನ್ನು ಮಾಡುತ್ತಿದ್ದೇವೆ. ಎಲ್ಲರಿಗೂ ಸ್ಪರ್ಧಾ ಪರೀಕ್ಷೆಗೆ ತರಬೇತಿಯನ್ನು ಪಡೆಯುವುದು ಸಾಧ್ಯವಾಗುವುದಿಲ್ಲ. ವಸತಿ–ಸಾರಿಗೆ ಸಮಸ್ಯೆಗಳಿರುತ್ತವೆ. ಅವರವರ ಊರಿನಲ್ಲಿ ಓದಿಗೆ ಸೌಲಭ್ಯಗಳೇ ಸಿಗುವುದಿಲ್ಲ. ಆಕಾಂಕ್ಷಿಗಳೆಲ್ಲರಿಗೂ ಈಗ ಅಂತರ್ಜಾಲ ಬಳಕೆ ಸುಲಭಲಭ್ಯ. ಯುಟ್ಯೂಬ್‌ನಲ್ಲಿ ನಮ್ಮ ಎಲ್ಲ ವಿಡಿಯೊಗಳನ್ನು ವೀಕ್ಷಿಸಬಹುದು.

◆ **ಪಠ್ಯವನ್ನು ಯಾವ ರೀತಿ ಸಿದ್ಧ ಮಾಡಿದ್ದೀರಿ?**

ನಿರ್ದಿಷ್ಟ ಪಠ್ಯ ಎನ್ನುವುದಿಲ್ಲ. ಹಿಂದಿನ ಪ್ರಶ್ನೆ ಪ್ರತಿಕೆಗಳು ಹಾಗೂ ನಮ್ಮ ಅನುಭವದ ಆಧಾರದ ಮೇಲೆ ರೂಪಿಸಿರುತ್ತೇವೆ. ಒಂದಿಷ್ಟು ಕಾನ್ಸೆಪ್ಟ್ ಇರುತ್ತವೆ. ಅವನ್ನು ಬಳಸಿ ಪ್ರಶ್ನೆಗಳನ್ನು ಬಿಡಿಸಲು ಆರಂಭಿಸುತ್ತೇವೆ. ನಮ್ಮ ತರಬೇತಿ ಕೇಂದ್ರಕ್ಕೆ ಬರುವ ವಿದ್ಯಾರ್ಥಿಗಳಿಗಾಗಿ ಬುಕ್‌ಲೆಟ್ ತಯಾರಿಸಿದ್ದೇವೆ. ಅದೇ ಸಂಪನ್ಮೂಲವನ್ನು ಯುಟ್ಯೂಬ್‌ನಲ್ಲಿಯೂ ಬಳಸಲಾಗುತ್ತಿದೆ. ಯುಟ್ಯೂಬ್ ಜೊತೆಗೆ ಗೂಗಲ್ ಡ್ರೈವ್‌ನಲ್ಲಿ ನಮ್ಮ ಅಧ್ಯಯನದ ಬುಕ್‌ಲೆಟ್ ಲಿಂಕ್‌ನ ಪಿಡಿಎಫ್ ಹಾಕಿರುತ್ತೇವೆ. ಅದನ್ನೂ ಅಭ್ಯಾಸ ಮಾಡಬಹುದು. ಪ್ರಶ್ನೆಗಳಿದ್ದರೆ ಕಮೆಂಟ್ ಬಾಕ್ಸ್‌ನಲ್ಲಿ ದಾಖಲಿಸಬಹುದು. ಅವುಗಳನ್ನು ಸಂಗ್ರಹಿಸಿ ಮತ್ತೊಂದು ವಿಡಿಯೊ ಮಾಡಿ ಅನುಮಾನಗಳನ್ನು ಪರಿಹರಿಸುತ್ತೇವೆ. ಇವು ಬ್ಯಾಂಕ್ ಪರೀಕ್ಷೆಗೆ ಮಾತ್ರ ಸೀಮಿತವಾಗುವುದಿಲ್ಲ. ಬೇರೆ ಬೇರೆ ಪರೀಕ್ಷೆಗಳ ಮೆಂಟಲ್ ಎಬಿಲಿಟಿಗೆ ಅನುಕೂಲವಾಗುತ್ತವೆ. ಆನ್‌ಲೈನ್‌ನಲ್ಲಿ ಪ್ರಶ್ನೆ ಪ್ರತಿಕೆಗಳು ಇವೆ. ಅವುಗಳ ಆಧಾರದ ಮೇಲೆ ಅಧ್ಯಯನವನ್ನು ವಿಸ್ತರಿಸಿಕೊಳ್ಳಬೇಕು.

◆ **ಬಿ.ಎ. ವಿದ್ಯಾರ್ಥಿಯಾದ ನೀವು ಗಣಿತವನ್ನು ಕರಗತ ಮಾಡಿಕೊಂಡಿದ್ದು ಹೇಗೆ?**

ನಾನು ಬಿ.ಎ.ಗೆ ಓದು ನಿಲ್ಲಿಸಿ ಕೆಲಸ ಮಾಡುವ ಅನಿವಾರ್ಯತೆ ಇತ್ತು. ಅಧ್ಯಾಪಕ ಆಗಬೇಕು ಎನ್ನುವ ಆಸೆಯಿತ್ತು. ಆರ್ಥಿಕ ಸಂಕಷ್ಟ ಅದಕ್ಕೆ ಅವಕಾಶ ಕೊಡಲಿಲ್ಲ. ಉದ್ಯೋಗವನ್ನು ಹುಡುಕಲೇ ಬೇಕಿತ್ತು. ಬ್ಯಾಂಕಿಂಗ್ ಪರೀಕ್ಷೆಯಲ್ಲಿ ಯಾವುದೇ ಶಿಫಾರಸ್ಸು ಹಾಗೂ ಹಣದ ಅಗತ್ಯ ಬೀಳುವುದಿಲ್ಲ ಎಂದು ಯೋಚಿಸಿ ಬ್ಯಾಂಕಿಂಗ್ ಪರೀಕ್ಷೆ ಬರೆಯಲು ನಿರ್ಧರಿಸಿ ಓದಲು ಆರಂಭಿಸಿದೆ. ಬೇರೆ ಬೇರೆ ಪುಸ್ತಕಗಳ ಮೂಲದಿಂದ ಶಾರ್ಟ್‌ಕಟ್‌ಗಳನ್ನು ತಿಳಿದೆ. ಆಗ ಅಂತರ್ಜಾಲ ಈಗಿನಷ್ಟು ಸುಲಭಕ್ಕೆ ಸಿಗುತ್ತಿರಲಿಲ್ಲ. ಪುಸ್ತಕವನ್ನು ಆಧರಿಸಿಯೇ ಅಧ್ಯಯನ ಮಾಡಿದೆ. ಸ್ವಯಂ ಓದಿನಿಂದ ಪರೀಕ್ಷೆ ಪಾಸಾಗಿ ಎಸ್‌ಬಿಐನಲ್ಲಿ ನೌಕರಿ ಪಡೆಯಲು ಮೂರು ವರ್ಷ ತೆಗೆದುಕೊಂಡೆ. ಬ್ಯಾಂಕಿಂಗ್ ಸ್ಪರ್ಧಾ ಪರೀಕ್ಷೆಯಲ್ಲಿ ಎಲ್ಲ ವಿಷಯಗಳನ್ನು ಹೊಸದಾಗಿ ಕಲಿಯಬೇಕಾಗಿರುತ್ತದೆ. ನಾವು ಯಾವುದೇ ಶಿಸ್ತಿನ ವಿಭಾಗದಲ್ಲಿ ಪದವಿ ಪಡೆದಿದ್ದರೂ ಪುನಃ ಬೇರೆ ರೀತಿಯ ಅಧ್ಯಯನ ಮಾಡುವ ಅಗತ್ಯ ಇರುತ್ತದೆ. ನಾವು ತಯಾರಿ ಆಗಬೇಕು ಅಂದರೆ ಓದಲೇಬೇಕಾಗುತ್ತದೆ. ಇಲ್ಲಿಯ ಗಣಿತ ತೀರ ಕಷ್ಟದಾಯಕವಲ್ಲ. ಕೌಶಲ್ಯ ಮತ್ತು ಲಾಜಿಕ್ ಸೂತ್ರದಲ್ಲಿ ಇರುತ್ತದೆ. ಪ್ರಯತ್ನ ಮಾಡಿದರೆ ಯಾರಾದರೂ ಕರಗತ ಮಾಡಿಕೊಳ್ಳಬಹುದು.

◆ **ಯುಟ್ಯೂಬ್ ನೋಡಿಯೇ ಬ್ಯಾಂಕ್ ನೌಕರಿ ಪಡೆಯಬಹುದು ಅನ್ನುತ್ತೀರಾ?**

ಬ್ಯಾಂಕಿಂಗ್ ಪರೀಕ್ಷೆ ಪಾರದರ್ಶಕವಾಗಿರುತ್ತವೆ. ಪ್ರಯತ್ನ–ಪ್ರತಿಭೆ ಇದ್ದರೆ ಕೆಲಸ ಕಟ್ಟಿಟ್ಟ ಬುತ್ತಿ. ಇದಕ್ಕಾಗಿ ಯಾವುದೇ ವಶೀಲಿಬಾಜಿಯ ಅಗತ್ಯವಿಲ್ಲ. ಯುಟ್ಯೂಬ್ ನೋಡಿ ಪರೀಕ್ಷೆ ಪಾಸಾಗಬಹುದು. ಇಲ್ಲಿ ಕೆಲವೊಂದು ಕಾನ್ಸೆಪ್ಟ್‌ಗಳನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ತರ್ಕಬದ್ಧವಾಗಿ ವಿಶ್ಲೇಷಣೆಯನ್ನು ಮಾಡಬೇಕು. ಅವು ನಮ್ಮ ನಿತ್ಯ ಜೀವನದಲ್ಲಿ ಹೇಗೆ ಎದುರಾಗುತ್ತವೆ ಎನ್ನುವುದನ್ನು ಚಿಂತಿಸಬೇಕು. ಈ ಪರೀಕ್ಷೆಯಲ್ಲಿ ಎದುರಾಗುವ ಎಲ್ಲ ಪ್ರಶ್ನೆಗಳೂ ನಿತ್ಯ ಜೀವನದಲ್ಲಿ ಎದುರಾಗುವ ಸಮಸ್ಯೆಯನ್ನೇ ಆಧರಿಸಿರುತ್ತವೆ. ಅವುಗಳನ್ನು ಅನ್ವಯಿಸಿಕೊಂಡು ಉತ್ತರಿಸುವ ಕೌಶಲ್ಯ ವೃದ್ಧಿಸಿಕೊಳ್ಳಬೇಕು. ಅಭ್ಯರ್ಥಿ ನಿತ್ಯವೂ ಒಂದು ಪ್ರಶ್ನೆ ಪತ್ರಿಕೆ ಬಿಡಿಸಬೇಕು. ನಂತರ ಅದನ್ನು ವಿಶ್ಲೇಷಣೆ ಮಾಡಿ ಅವರ ಸಾಮರ್ಥ್ಯ ಮತ್ತು ವೈಫಲ್ಯಗಳನ್ನು ಚಿಂತಿಸಬೇಕು. ಒಂದು ವರ್ಷ ಅಭ್ಯಾಸ ಮಾಡಬೇಕು. ಅಂತರ್ಜಾಲದಲ್ಲಿ ಈ ಸಂಬಂಧ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ಕೆಲವೊಂದು ಗಣಿತ ಸೂತ್ರಗಳನ್ನು ಅಭ್ಯಾಸ ಮಾಡಬೇಕು. ದಿನ ಪತ್ರಿಕೆ ಓದಲೇಬೇಕು. ದಿನವೂ ಹತ್ತು ಇಂಗ್ಲಿಷ್ ಹೊಸ ಶಬ್ದಗಳನ್ನು ಕಲಿಯಬೇಕು. ಇಷ್ಟು ಮಾಡಿದರೆ ನೌಕರಿ ನಮ್ಮನ್ನು ಹುಡುಕಿಕೊಂಡು ಬರುತ್ತದೆ.

◆ **ಪರೀಕ್ಷೆ ಯಾವ ರೀತಿ ಇರುತ್ತದೆ?**

ಕ್ಲರ್ಕ್ ಆದರೆ ಎರಡು ಹಂತ, ಅಧಿಕಾರಿಗಳಿಗೆ ಮೂರು ಹಂತದಲ್ಲಿ ಪರೀಕ್ಷೆ ನಡೆಯುತ್ತದೆ. ಪದವೀಧರರು ಈ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಆನ್‌ಲೈನ್‌ಲ್ಲಿ 100 ಅಂಕಗಳಿಗೆ ಪೂರ್ವಭಾವಿ (preliminary) ಬರೆಯಬೇಕು. ಇಂಗ್ಲಿಷ್–ಅಂಕಗಣಿತ ಸೇರಿದಂತೆ ಮೂರು ವಿಭಾಗದಲ್ಲಿ ಪ್ರಶ್ನೆಗಳಿರುತ್ತವೆ. ಒಂದು ಗಂಟೆಯಲ್ಲಿ ಅದನ್ನು ಪೂರೈಸಬೇಕು. ನಮ್ಮ ಅಂಕಗಳ ಆಧಾರದ ಮೇಲೆ ಮುಖ್ಯ ಪರೀಕ್ಷೆಗೆ 1:20 ಅನುಪಾತದಲ್ಲಿ ಅವಕಾಶ ಕಲ್ಪಿಸುತ್ತಾರೆ. ಮುಖ್ಯ ಪರೀಕ್ಷೆ ಪಾಸಾದರೆ ಕ್ಲರ್ಕ್ ಕೆಲಸ ಸಿಗುತ್ತದೆ. ಅಧಿಕಾರಿ ಪರೀಕ್ಷೆ ಎದುರಿಸಿದವರಿಗೆ ಸಂದರ್ಶನವಿರುತ್ತದೆ. 1:3 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯುತ್ತಾರೆ. ಮುಖ್ಯ ಪರೀಕ್ಷೆ ಮತ್ತು ಸಂದರ್ಶನದ ಅಂಕದ ಮೇಲೆ ನೇಮಕವಾಗುತ್ತಾರೆ.

ವಿಡಿಯೊ ವೀಕ್ಷಣೆಗೆ bit.ly/2wX8VsQ ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.